ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

BENGALURU
CITY UNIVERSITY

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

ಸಂಖ್ಯೆ: ಬಿಸಿಯು/ಎಸ್‌ವೈಎನ್/ವಿಶೇಷ ಸಭೆ//83/2020-21 ದಿನಾಂಕ: 02.12.2020.

ಗೆ,

ಮಾನ್ಯ ಸಿಂಡಿಕೇಟ್ ಸದಸ್ಯರು,
ಬೆಂಗಳೂರು ನಗರ ವಿಶ್ವವಿದ್ಯಾನಿಲಯ,
ಬೆಂಗಳೂರು

ಮಾನ್ಯರೆ,

**ವಿಷಯ: ದಿನಾಂಕ: 17.11.2020 ರಂದು ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ನಡಾವಳಿಗಳು.**

ಉಲ್ಲೇಖ: ದಿನಾಂಕ 17.11.2020 ರಂದು ಜರುಗಿದ ಸಿಂಡಿಕೇಟ್ ಸಭೆಯ ನಡಾವಳಿಗಳ ಉದ್ಧೃತ ಭಾಗ ಕಳುಹಿಸಿದ ಪತ್ರ ನಂ.ಬಿಸಿಯು/ಎಸ್‌ವೈಎನ್/ವಿಶೇಷ/259/2020-21 ದಿ:17.11.2020.

***

ದಿನಾಂಕ: **17.11.2020** ರಂದು ಅಪರಾಹ್ನ 03.00 ಗಂಟೆಗೆ ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ನಡಾವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ 5.16 ರನ್ವಯ ಕಳುಹಿಸುತ್ತಿದ್ದೇನೆ. ನಡಾವಳಿಯ ಉದ್ಧೃತ ಭಾಗವನ್ನು ದಿನಾಂಕ 17.11.2020 ರಂದು ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ ಕಳುಹಿಸಲಾಗಿದೆ. ಪ್ರಸ್ತುತ ವಿವರವಾದ ನಡಾವಳಿಯನ್ನು ಈ ಪತ್ರದೊಂದಿಗೆ ಕಳುಹಿಸತ್ತಿದ್ದೇನೆ.

ನಡಾವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡಾವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ, ಮೇಲೆ ಹೇಳಿದ ಪರಿನಿಯಮಾವಳಿಗಳ ಅನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,
2/12
ಕುಲಸಚಿವರು

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು-1.
3. ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳಿಗೆ. ಬಿಸಿಯು.
4. ಕಛೇರಿ ಪ್ರತಿ / ರಕ್ಷಣಾ ಕಡತ

ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

**BENGALURU CITY UNIVERSITY**

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

**ಸಂಖ್ಯೆ: ಬಿಸಿಯು/ಎಸ್‌ವೈಎನ್/ವಿಶೇಷ ಸಭೆ/೧೪/2020–21** **ದಿನಾಂಕ: 02.12.2020.**

ದಿನಾಂಕ 17.11.2020 ರಂದು ಅಪರಾಹ್ನ 0[illegible].00 ಗಂಟೆಗೆ ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು 560 001 ಇಲ್ಲಿ ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ನಡಾವಳಿಗಳು.

**ಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ. ಎಸ್. ಜಾಫೆಟ್, ಕುಲಪತಿಗಳು | ಸಭಾಧ್ಯಕ್ಷರು |
| 2. | ಶ್ರೀ ಪಿ. ಪ್ರದೀಪ್, ಐ,ಎ,ಎಸ್<br>ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ | ಸದಸ್ಯರು |
| 3. | ಡಾ:ಹೆಚ್.ಯು. ತಳವಾರ,<br>ನಿರ್ದೇಶಕರು, ತಾಂತ್ರಿಕ ಶಿಕ್ಷಣ ಲಾಖೆ | ಸದಸ್ಯರು |
| 4. | ಡಾ: ಹೆಚ್.ಟಿ. ಅರವಿಂದ್ | ಸದಸ್ಯರು |
| 5. | ಪ್ರೊ ಕೆ. ರಮೇಶ್ | ಸದಸ್ಯರು |
| 6. | ಡಾ: ಲಿಡಿಯಾ ಪಿ. ಸ್ಯಾಮುಯೆಲ್ | ಸದಸ್ಯರು |
| 7. | ಶ್ರೀ ಎಂ. ಚಿಕ್ಕಮುನಿಯಪ್ಪ, | ಸದಸ್ಯರು |
| 8. | ಶ್ರೀ ಕರಣ್‌ಕುಮಾರ್ | ಸದಸ್ಯರು |
| 9. | ಶ್ರೀ ಹೆಚ್.ಎನ್. ಹರಿಪ್ರಸಾದ | ಸದಸ್ಯರು |
| 10. | ಶ್ರೀಮತಿ ಜ್ಯೋತಿ ವಿಜಯ್ | ಸದಸ್ಯರು |
| 11. | ಶ್ರೀ ಟಿ.ಹೆಚ್. ಶ್ರೀನಿವಾಸಯ್ಯ | ಸದಸ್ಯರು |
| 12. | ಡಾ. ಆರ್.ಕೆ. ಚಂದ್ರನಾಥ್ | ಸದಸ್ಯರು |
| 13. | ಪ್ರೊ. ಬಿ. ರಮೇಶ್, ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 14. | ಡಾ.ವಿ. ಶಿವರಾಂ, ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |

ಕುಲಸಚಿವರು ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರಿಗೆ ಸ್ವಾಗತಕೋರಿ ಹೊಸದಾಗಿ ನಾಮನಿರ್ದೇಶನ ಹೊಂದಿದ ಪ್ರಾಂಶುಪಾಲರುಗಳನ್ನು ಸಭೆಗೆ ಪರಿಚಯಿಸಿದರು. ನಂತರ ಕುಲಪತಿಗಳನ್ನು ಕಾರ್ಯಸೂಚಿ ಕುರಿತು ವಿವರಿಸಲು ವಿನಂತಿಸಿದರು.

ಅತ್ಯಂತ ಕಡಿಮೆ ಅವಧಿಯಲ್ಲಿ ಅಂದರೆ 3 ಗಂಟೆಯ ಮುಂಚೆ ಸೂಚನೆ ನೀಡಿ ಕರೆದಿರುವ ಈ ವಿಶೇಷ ಸಭೆಗೆ ಸದಸ್ಯರೆಲ್ಲರೂ ಆಗಮಿಸಿರುವುದಕ್ಕೆ ಕುಲಪತಿಗಳು ಧನ್ಯವಾದಗಳನ್ನು ತಿಳಿಸಿದರು.

**ವಿಷಯ: 1. ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಅಭಿವೃದ್ಧಿ ಕಾಮಗಾರಿಗಳನ್ನು ಸರ್ಕಾರದ ಸಂಸ್ಥೆಯ ಮುಖಾಂತರ ಅನುಷ್ಠಾನಗೊಳಿಸುವ ಕುರಿತು ಸರ್ಕಾರದ ಆದೇಶ ಹಾಗೂ ಸಂಬಂಧಿತ ವಿಷಯಗಳ ಚರ್ಚೆ.**

**2. ದಿನಾಂಕ 18.11.2020 ರಂದು ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಅಭಿವೃದ್ಧಿ ಕಾಮಗಾರಿಗಳ ಶಿಲಾನ್ಯಾಸ ಕಾರ್ಯಕ್ರಮದ ಮಾಹಿತಿ.**

ಕೆಲವು ಪತ್ರಿಕೆಗಳಲ್ಲಿ ವಿಶ್ವವಿದ್ಯಾನಿಲಯದ ಅಭಿವೃದ್ಧಿ ಕಾಮಗಾರಿಗಳ ಕುರಿತು ವರದಿಗಳು ಬಂದಿರುವ ಹಿನ್ನೆಲೆಯಲ್ಲಿ ಈ ಸಭೆ ಕರೆಯಲಾಗಿದ್ದು; ವಿಶ್ವವಿದ್ಯಾನಿಲಯದ ಅಭಿವೃದ್ಧಿ ಕಾಮಗಾರಿಗಳನ್ನು ಸರ್ಕಾರಿ ಸ್ವಾಮ್ಯದ ಒಂದು ಸಂಸ್ಥೆಗೆ ವಹಿಸಲು ವಿಶ್ವವಿದ್ಯಾನಿಲಯ ಸರ್ಕಾರಕ್ಕೆ ವಿನಂತಿಸಿರುವುದು, ಸರ್ಕಾರ ಈ ಕುರಿತು ಹೊರಡಿಸಿದ ಆದೇಶ, ಆಡಳಿತಾತ್ಮಕ ಮಂಜೂರಾತಿ ನೀಡಲು ತಾವು ಸರ್ಕಾರವನ್ನು ಕೋರಿರುವುದು, ಸರ್ಕಾರದ ಮಂತ್ರಿ ಮಂಡಳ ಇದಕ್ಕೆ ಅನುಮೋದನೆ ನೀಡಿರುವ ವಿಷಯಗಳನ್ನು ಸಭೆಗೆ ತಿಳಿಸಿದರು. ಸನ್ಮಾನ್ಯ ಮುಖ್ಯ ಮಂತ್ರಿಗಳು ನಾಳೆ, ಅಂದರೆ ದಿನಾಂಕ 18.11.2020 ರಂದು ಶಿಲಾನ್ಯಾಸ ಕಾರ್ಯಕ್ರಮ ನೆರವೇರಿಸಲಿದ್ದಾರೆ. ದಿನಾಂಕ 19.11.2020 ರಂದು ಸಿಂಡಿಕೇಟ್ ಸಾಮಾನ್ಯ ಸಭೆ ಕರೆಯಲಾಗಿದ್ದು, ಈ ವಿಷಯಕ್ಕೆ ಸಂಬಂಧಿಸಿದ ವಿವರಗಳನ್ನು ಸಭೆಯ ಮುಂದೆ ಮಂಡಿಸಲು ಹಾಗೂ ತಪ್ಪು ಗ್ರಹಿಕೆಗಳನ್ನು ನಿವಾರಿಸಲು ಈ ವಿಶೇಷ ಸಭೆಯನ್ನು ಕರೆಯಲಾಗಿದೆ. ಕೆಲವು ಸಿಂಡಿಕೇಟ್ ಸದಸ್ಯರು ಕಳುಹಿಸಿದ ಈ–ಮೇಲ್‌ಗೆ ತಾವು ಮಾಹಿತಿ ನೀಡಿರುವುದಾಗಿ ತಿಳಿಸಿದರು.

ಅಭಿವೃದ್ಧಿ ಕಾಮಗಾರಿಗಳ ಕುರಿತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಇಂಜಿನಿಯರಿಂಗ್ ವಿಭಾಗ ಸಿದ್ದಪಡಿಸಿದ ಕಾಮಗಾರಿಗಳ ವಿವರಗಳನ್ನು ಪ್ರೆಸಂಟೇಶನ್ ಮಾಡಲಿದ್ದು ಅದನ್ನು ಸದಸ್ಯರು ಪರಿಶೀಲಿಸಬೇಕೆಂದು ಕೋರಿದರು.

ಮಾನ್ಯ ಸದಸ್ಯರಾದ ಶ್ರೀ ಕರಣ್‌ಕುಮಾರ್ ರವರು, ಪ್ರೆಸಂಟೇಶನ್ ನೀಡುವ ಪೂರ್ವದಲ್ಲಿ ಕುಲಪತಿಗಳು ತಮ್ಮ ವಿವರಣೆಯಲ್ಲಿ ತಿಳಿಸಿರುವ ಅಂಶಗಳನ್ನು ಹಾಗೂ ಅನುಸರಿಸಿರುವ ವಿಧಾನಗಳನ್ನು ಪಟ್ಟಿಮಾಡಿ ಕೆಳಕಂಡ ವಿಷಯಗಳ ಕುರಿತು ವಿವರಣೆ ಬಯಸಿದರು.

- News reports appeared in the Press
- Work entrusted to the Agency
- Cabinet has given approval
- 19th Nov. Syndicate meeting was convened for presentation
- Misconception
- Answer to the mail sent by Mr. Karankumar supported by other members

ಮಾನ್ಯ ಸದಸ್ಯರಾದ ಶ್ರೀ ಕರಣ್‌ಕುಮಾರ್ ರವರು ಸದಸ್ಯರಾದ ಶ್ರೀ ಹೆಚ್. ಎನ್. ಹರಿಪ್ರಸಾದ್ ರವರಿಗೆ ದಿನಾಂಕ 16.06.2020 ರ ಸಿಂಡಿಕೇಟ್ ನಿರ್ಣಯವನ್ನು ಸಭೆಗೆ ಓದಿ ತಿಳಿಸಲು ವಿನಂತಿಸಿದರು.

ದಿನಾಂಕ 16.06.2020 ರ ನಿರ್ಣಯ ಈ ಕೆಳಕಂಡಂತಿದೆ:

ವಿಷಯ ಸಂಖ್ಯೆ–11 – Campus Redevelopment - reg.

ಸಿಂಡಿಕೇಟ್ ನಿರ್ಣಯ:

1. Keeping the necessity of spending surplus monies that is in reserve at BCU, it was decided to reserve INR 155 Crores (INR 90 Cr of last financial year and INR 65 Crore during FY 2020-21) for campus redevelopment/development activities in phase-1. However, till such time, following procedures have to be followed:

a) Requirements from all the departments for the next 5-10 years have to be collected.
b) Architect for designing the Master Plan of the project be appointed
c) Architectural drawings as per the requirement of the University be prepared

d) Tendering for appointment of agency for execution.

e) The entire process at every stage has to go before the works committee and then be placed before the Syndicate

f) The proposed building's master plan, building design and elevation of the Architect, estimation of bill of materials based on prevailing SR rate and approval of the Works Committee of BCU are made available to the Syndicate, the approval of the proposed construction / redevelopment or renovation plan was kept pending.

2. In addition, as we do not have the engineering section at BCU, the Syndicate resolved to consider awarding the construction and renovation of building works to either PWD or CPWD or any PSU undertakings of the State and Central Government.

3. Further, as resolved by the Syndicate, a detailed presentation on the proposed building plan was sought by the Syndicate prior to approval.

ಸದರಿ ಸಭೆಯ ತೀರ್ಮಾನದ ಪ್ರಕಾರ ಕೈಗೊಂಡಿರುವ ಕ್ರಮಗಳ ಕುರಿತು ವಿವರಿಸುವಂತೆ ತಿಳಿಸಿದರು.

ಕುಲಪತಿಗಳು ಕೆಳಗಿನ ಮಾಹಿತಿಯನ್ನು ಸಭೆಗೆ ನೀಡಿದರು.

a) ಈ ಕುರಿತಂತೆ ದಿನಾಂಕ 30.07.2020 ರಂದು ಎಲ್ಲಾ ವಿಭಾಗಗಳಿಗೆ ಸುತ್ತೋಲೆ ಹೊರಡಿಸಿ ವಿಭಾಗದ ಅಗತ್ಯಗಳ ವಿವರ ನೀಡುವಂತೆ ತಿಳಿಸಲಾಗಿದೆ. ಅದಕ್ಕೆ ವಿಭಾಗಗಳಿಂದ ಮಾಹಿತಿ ಸ್ವೀಕೃತವಾಗಿಲ್ಲ ಎಂದು ತಿಳಿಸಿದರು.

b) ಈ ಕುರಿತಂತೆ ವಿಶ್ವವಿದ್ಯಾನಿಲಯದ Master Plan ಸಿದ್ದಪಡಿಸಲು Expression of interest ಗಾಗಿ ಟೆಂಡರುಗಳನ್ನು ಕರೆಯಲಾಗಿದೆ. ಆದರೆ ಈ ಕೆಲಸಗಳನ್ನು ಕಾಮಗಾರಿ ನಿರ್ವಹಿಸುವ ಸಂಸ್ಥೆಗೆ ವಹಿಸಿರುವ ಹಿನ್ನೆಲೆಯಲ್ಲಿ ಮುಂದಿನ ಕ್ರಮ ಕೈಗೊಂಡಿರುವುದಿಲ್ಲವೆಂದು ಹೇಳಿದರು.

c) ಈ ಕುರಿತಂತೆ ಯಾವುದು ಕ್ರಮ ಕೈಗೊಂಡಿಲ್ಲ.
d) ಈ ಕುರಿತಂತೆ ಯಾವುದು ಕ್ರಮ ಕೈಗೊಂಡಿಲ್ಲ.
e) ಈ ಕುರಿತಂತೆ ಯಾವುದು ಕ್ರಮ ಕೈಗೊಂಡಿಲ್ಲ.
f) ಈ ಕುರಿತಂತೆ ಯಾವುದು ಕ್ರಮ ಕೈಗೊಂಡಿಲ್ಲ.

ಸಿಂಡಿಕೇಟ್ ನಿರ್ಣಯದ ಪ್ರಕಾರ ಕ್ರಮ ಸಂಖ್ಯೆ (1) (a) ಯಿಂದ (f) ವರೆಗೆ ಸೂಚಿಸಿದ ಕ್ರಮಗಳನ್ನು ಮೊದಲು ತೆಗೆದುಕೊಂಡು ನಂತರ ಕ್ರ.ಸಂ.(2) ರಲ್ಲಿ ನಿರ್ಣಯಿಸಿದ, "In addition, as we do not have the engineering section at BCU, the Syndicate resolved to consider awarding the construction and renovation of building works to either PWD or CPWD or any PSU undertakings of the State and Central Government" ಕುರಿತಂತೆ ಸರ್ಕಾರಿ ಸ್ವಾಮ್ಯದ ಒಂದು ಸಂಸ್ಥೆಗೆ ಕಾಮಗಾರಿ ವಹಿಸಿಕೊಡಲು ಕೋರಿ ಪತ್ರ ಬರೆಯಬೇಕಾಗಿತ್ತು. ಆದರೆ ಕುಲಸಚಿವರು ದಿನಾಂಕ 10.07.2020 ರಂದು ಸಿಂಡಿಕೇಟ್ ನಿರ್ಣಯದ (1) (a-f) ರಲ್ಲಿ ಸೂಚಿಸಿದ ಯಾವ ಕ್ರಮಗಳನ್ನು ಕೈಗೊಳ್ಳದೆ ಕಾಮಗಾರಿಗಳನ್ನು ನಿರ್ವಹಿಸಲು ಒಂದು ಸರ್ಕಾರಿ ಸಂಸ್ಥೆಗೆ ವಹಿಸುವಂತೆ ಕೋರಿ ಸರ್ಕಾರಕ್ಕೆ ಬರೆದ ಪತ್ರ ಸಿಂಡಿಕೇಟ್ ತೀರ್ಮಾನಕ್ಕೆ ವಿರುದ್ಧವಾಗಿದೆ ಎಂದು ಶ್ರೀ ಕರಣ್‌ಕುಮಾರ್ ಅವರು ತಿಳಿಸಿದರು. ಮುಂದುವರೆದು, ಸಿಂಡಿಕೇಟ್ ತೀರ್ಮಾನದಂತೆ 1(f) ಪ್ರಕಾರ "The proposed building's master plan, building design and elevation of the Architect, estimation of bill of materials based on prevailing SR rate and approval of the Works Committee of BCU are made available to the Syndicate, the approval of the proposed construction / redevelopment or renovation plan was kept pending." ಸದರಿ ಕಾಮಗಾರಿಗಳ ಕುರಿತಂತೆ Master Plan, ವಾಸ್ತುಶಿಲ್ಪ ವಿನ್ಯಾಸ, ಅಂದಾಜು, ವೆಚ್ಚಗಳ ವಿವರಗಳನ್ನು ವಿಶ್ವವಿದ್ಯಾನಿಲಯದ ಕಾಮಗಾರಿ ಸಮಿತಿ ಹಾಗೂ ಸಿಂಡಿಕೇಟ್ ಸಭೆಗಳ ಒಪ್ಪಿಗೆ ಪಡೆಯದೆ ನೇರವಾಗಿ ಸರ್ಕಾರಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಲು ಕೋರಿ ಬರೆದ ಪತ್ರ ಸಿಂಡಿಕೇಟ್ ತೀರ್ಮಾನದ ಪ್ರಕಾರ ಇರುವುದಿಲ್ಲ. ಈ ಕುರಿತು ರಾಜ್ಯಪಾಲರಿಗೆ ಕೆಲವು ಸಿಂಡಿಕೇಟ್ ಸದಸ್ಯರು ಪತ್ರ ಬರೆದು ಕ್ರಮ ಕೈಗೊಳ್ಳುವಂತೆ ವಿನಂತಿಸಲಾಗಿದೆ. ಇದಲ್ಲದೆ, ವಿಶ್ವವಿದ್ಯಾನಿಲಯದ ಆಡಳಿತಕ್ಕೆ ಸಂಬಂಧಿಸಿದಂತೆ ತೀರ್ಮಾನ ಕೈಗೊಳ್ಳುವ ಅಧಿಕಾರ ಸಿಂಡಿಕೇಟ್ ಹೊಂದಿರುತ್ತದೆ ಎಂದು ಹೇಳಿದರು.

ಮಾನ್ಯ ಸದಸ್ಯರಾದ ಡಾ: ಹೆಚ್. ಟಿ. ಅರವಿಂದ್ ರವರು ಮಾತನಾಡಿ ಸಿಂಡಿಕೇಟ್ ಸಭೆಯ ತೀರ್ಮಾನವನ್ನು ಸರಿಯಾಗಿ ಸರ್ಕಾರಕ್ಕೆ ತಿಳಿಸಿಲ್ಲ. ಸರ್ಕಾರದೊಂದಿಗೆ ಮಾಡಿದ ಪತ್ರ ವ್ಯವಹಾರಗಳ ಮಾಹಿತಿಯನ್ನು ಸಿಂಡಿಕೇಟ್ ಸಭೆಗೆ ಒದಗಿಸಿಲ್ಲ. ಕುಲಾಧಿಪತಿಗಳ ಸುತ್ತೋಲೆ ಪ್ರಕಾರ ಕುಲಪತಿಗಳು ತಮ್ಮ ಅಧಿಕಾರ ಮುಗಿಯುವ 6 ತಿಂಗಳು ಮುಂಚೆ ಯಾವುದೇ Policy ತೀರ್ಮಾನ ಕೈಗೊಳ್ಳುವಹಾಗಿಲ್ಲ ಎಂದು ಹೇಳಿ, ವಿವಿಧ ವಿಭಾಗಗಳಿಂದ ಮಾಹಿತಿ ಪಡೆಯದೇ ಯೋಜನೆ ಸಿದ್ದಪಡಿಸಲು ಹೇಗೆ ಸಾಧ್ಯವೆಂದು ಕೇಳಿದರು.

ಮಾನ್ಯ ಸದಸ್ಯರಾದ ಡಾ: ಆರ್.ಕೆ. ಚಂದ್ರನಾಥ್ ರವರು ಮಾತನಾಡಿ, ವಿಶ್ವವಿದ್ಯಾನಿಲಯದಲ್ಲಿ ಹೊಸದಾಗಿ ಸ್ಥಾಪನೆಯಾದ ಸಸ್ಯ ಶಾಸ್ತ್ರ, ಪ್ರಾಣಿಶಾಸ್ತ್ರ ವಿಭಾಗಗಳಿಗೆ ಅಗತ್ಯ ಪೀಠೋಪಕರಣ/ ವೈಜ್ಞಾನಿಕ ಉಪಕರಣ ಇತ್ಯಾದಿಗಳನ್ನು ಒದಗಿಸಿಲ್ಲ. ಮೊದಲು ಈ ಮೂಲ ಅಗತ್ಯಗಳನ್ನು ಒದಗಿಸಲು ಕ್ರಮ ವಹಿಸಿ. ಸಿಂಡಿಕೇಟ್ ಸಭೆಯನ್ನು ಲಘುವಾಗಿ ಪರಿಗಣಿಸಬಾರದು ಎಂದು ಹೇಳಿದರು.

ಮಾನ್ಯ ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್ ರವರು ವಿಭಾಗಗಳಿಗೆ ಸುತ್ತೋಲೆ ಕಳುಹಿಸಿ ಎರಡು ತಿಂಗಳು ಕಳೆದರೂ ಈ ಕುರಿತು ಮಾಹಿತಿ ಬಂದಿಲ್ಲವೆಂದರೆ, ಅದು ಆಡಳಿತದ ವೈಫಲ್ಯವನ್ನು ತಿಳಿಸುತ್ತದೆ ಎಂದು ಹೇಳಿದರು.

ಕುಲಪತಿಗಳು ಈ ಮೂಲ ಅಗತ್ಯಗಳು ಮತ್ತು ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಆಯವ್ಯಯದಲ್ಲಿ ಅವಕಾಶ ಕಲ್ಪಿಸಲಾಗಿದೆ ಎಂದು ಹೇಳಿದರು. ವಿಶ್ವವಿದ್ಯಾನಿಲಯದ ಹಾಲಿ ಕಟ್ಟಡಗಳ ಧೃಡತೆಯನ್ನು ಪರಿಶೀಲಿಸಲು ಹಾಗೂ ಆಗಬೇಕಾದ ರಿಪೇರಿ ಕುರಿತು ಕಳೆದ ಎರಡು ವರ್ಷಗಳಿಂದ ವಿವಿಧ ಕ್ರಮಗಳನ್ನು ಕೈಗೊಳ್ಳಲಾಗಿದೆ. Structural Engineer ಅವರ ಸೇವೆ ಪಡೆದು ವಿವರವಾದ ವರದಿ ಕಾಮಗಾರಿ ಸಮಿತಿ ಹಾಗೂ ಸಿಂಡಿಕೇಟ್ ಸಭೆಗಳಲ್ಲಿ ಚರ್ಚಿಸಲಾಗಿದೆ. ಇರುವ ಕಟ್ಟಡಗಳ ದುರಸ್ತಿ ಹಾಗೂ ನವೀಕರಣಕ್ಕೆ ಸಂಬಂಧಿಸಿದಂತೆ ವರದಿ ಇಂಜಿನಿಯರಿಂಗ್ ವಿಭಾಗದಲ್ಲಿ ಇದೆ ಎಂದು ಹೇಳಿದರು.

ಮಾನ್ಯ ಸದಸ್ಯರಾದ ಶ್ರೀ ಹೆಚ್. ಎನ್. ಹರಿಪ್ರಸಾದ್ ರವರು ಮತ್ತೊಂದು ಸಲ ದಿನಾಂಕ 16.06.2020 ರ ಸಿಂಡಿಕೇಟ್ ಸಭೆಯ ತೀರ್ಮಾನವನ್ನು ಓದಿ, ನಿಗದಿತ ವಿಧಿ ವಿಧಾನಗಳನ್ನು ಪಾಲಿಸುವುದು ಎಲ್ಲರ ಕರ್ತವ್ಯವಾಗುತ್ತದೆ. ಸಿಂಡಿಕೇಟ್ ತೀರ್ಮಾನದಂತೆ ಕ್ರಮ ಕೈಗೊಳ್ಳದೆ ಸರ್ಕಾರಕ್ಕೆ ಪತ್ರ ಬರೆದಿರುವುದಕ್ಕೆ ಯಾವರೀತಿಯ ಸಮರ್ಥನೆ ನೀಡ ಬಹುದು ಎಂದು ಪ್ರಶ್ನಿಸಿದರು.

ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರಾದ ಶ್ರೀ ಪ್ರದೀಪ್ ರವರು ಚರ್ಚೆಯಲ್ಲಿ ಭಾಗವಹಿಸಿ ಭಾಗವಹಿಸಿದ ಸದಸ್ಯರೆಲ್ಲರ ಭಾವನೆಗಳು ವಿಶ್ವವಿದ್ಯಾನಿಲಯದ ಅಭಿವೃದ್ದಿಗೆ ಕೇಂದ್ರಿತವಾಗಿರುವುದು ಸಂತೋಷಕರ. ಚರ್ಚೆಯ ಸ್ವರೂಪ ಗಮನಿಸಿದಲ್ಲಿ ದಿನಾಂಕ 16.06.2020 ರ ಸಿಂಡಿಕೇಟ್ ತೀರ್ಮಾನ ಹಾಗೂ ಈ ಕುರಿತು ಸರ್ಕಾರಕ್ಕೆ ಬರೆದ ಪತ್ರಗಳ ಕುರಿತಾಗಿದ್ದು ಕುಲಪತಿಗಳು ಈ ಕುರಿತು ವಿವರ ಒದಗಿಸಬೇಕೆಂದು ಹೇಳಿದರು.

ಕುಲಪತಿಗಳು ವಿವರ ನೀಡಿ ದಿನಾಂಕ 10.07.2020 ರಂದು ಬರೆದ ಪತ್ರದ ಸಾರಾಂಶವನ್ನು ಸಭೆಗೆ ತಿಳಿಸಿ, ಸರ್ಕಾರದ ಆದೇಶದ ಪ್ರಸ್ತಾವನೆಯಲ್ಲಿ ಸಿಂಡಿಕೇಟ್ ಸಭೆಯ ತೀರ್ಮಾನವನ್ನು ನಮೂದಿಸಲಾಗಿದೆ. ಆದರೆ ಜಾರಿಗೊಳಿಸಲು ವಿಶ್ವವಿದ್ಯಾನಿಲಯದಲ್ಲಿ ಇಂಜಿನಿಯರಿಗ್ ವಿಭಾಗ ಇಲ್ಲದಿರುವುದರಿಂದ ಮಾಸ್ಟರ್ ಪ್ಲಾನ್, ನಕ್ಷೆ, ವಾಸ್ತು ಶಿಲ್ಪಿ ಕಾರ್ಯಗಳನ್ನು ಸದರಿ ಸಂಸ್ಥೆಗೆ ವಹಿಸಿ ಆದೇಶ ನೀಡಿದ್ದಾರೆ. ಈ ಕಾರಣದಿಂದ Expression of interest ಸಂಬಂಧಿತ ಪ್ರಕ್ರಿಯೆ ಮುಂದುವರೆಸಲಾಗಲಿಲ್ಲ. ಸರ್ಕಾರ ವಿಶ್ವವಿದ್ಯಾನಿಲಯದ ಹಿತದೃಷ್ಟಿಯಿಂದ ಅಭಿವೃದ್ಧಿ ಕಾಮಗಾರಿಗಳ ಕುರಿತು ಹೊರಡಿಸಿರುವ ಆದೇಶವನ್ನು ಮಾನ್ಯ ಸದಸ್ಯರು ಅನುಮೋದಿಸಬೇಕೆಂದು ಕೋರಿದರು.

ಮಾನ್ಯ ಸದಸ್ಯರಾದ ಡಾ: ಲಿಡಿಯಾ ಪಿ. ಸ್ಯಾಮುಯೆಲ್ ರವರು ಸದಸ್ಯರು ಸಭೆಯ ಚರ್ಚೆಯಲ್ಲಿ ಪಾಲ್ಗೊಳ್ಳುವಾಗ ಸಂಯಮದಿಂದ ವರ್ತಿಸಬೇಕು, ಒಬ್ಬ ಸದಸ್ಯರು ಮಾತನಾಡುವಾಗ, ಮಧ್ಯ ಪ್ರವೇಶಿಸುವುದು ಸರಿಯಲ್ಲ ಎಂದು ಹೇಳಿ ಸರ್ಕಾರದ ಆದೇಶವನ್ನು ಒಪ್ಪಿ ಕಾರ್ಯಕ್ರಮ ನಡೆಯಲು ಅವಕಾಶ ನೀಡಬೇಕೆಂದು ಹೇಳಿದರು.

ಮಾನ್ಯ ಸದಸ್ಯರಾದ ಡಾ: ಹೆಚ್. ಟಿ. ಅರವಿಂದ್ ರವರು ದಿನಾಂಕ 16.06.2020 ರ ಸಿಂಡಿಕೇಟ್ ತೀರ್ಮಾನ ಹಾಗೂ ದಿನಾಂಕ 10.07.2020 ಮತ್ತು 28.08.2020 ಪತ್ರಗಳನ್ನು ಗಮನಿಸಿದಲ್ಲಿ ಸರ್ಕಾರಕ್ಕೆ ತಪ್ಪು ಮಾಹಿತಿ ನೀಡಿರುವುದು ವ್ಯಕ್ತವಾಗುತ್ತದೆ. ಸಿಂಡಿಕೇಟ್ ತೀರ್ಮಾನದ ಕ್ರಸಂ.(1) ರಲ್ಲಿರುವ ಅಂಶಗಳ ಕುರಿತು ಕ್ರಮ ಕೈಗೊಳ್ಳದೇ ಸರ್ಕಾರಕ್ಕೆ ಪತ್ರ ಬರೆದು ಕಾಮಗಾರಿಗಳ ನಿರ್ವಹಣೆಗೆ ಒಂದು ಸರ್ಕಾರಿ ಸ್ವಾಮ್ಯದ ಸಂಸ್ಥೆಗೆ ವಹಿಸುವಂತೆ ವಿನಂತಿಸಿರುವುದು ಸಿಂಡಿಕೇಟ್ ತೀರ್ಮಾನದ ಪ್ರಕಾರ ಇರುವುದಿಲ್ಲ. ಸಿಂಡಿಕೇಟ್ ತೀರ್ಮಾನದಲ್ಲಿ ಸೂಚಿಸಿದ ಯಾವ ಕ್ರಮವನ್ನೂ ಕೈಗೊಂಡಿರುವುದಿಲ್ಲ. ಆದ ಕಾರಣ ಮೊದಲು ವಿವರಗಳನ್ನು ಮಂಡಿಸಿ

ಸಿಂಡಿಕೇಟ್ ಸಭೆಯ ಒಪ್ಪಿಗೆ ಪಡೆದು ನಂತರ ಸರ್ಕಾರಕ್ಕೆ ಪತ್ರ ಬರೆಯಬೇಕು ಎಂದು ಹೇಳಿದರು. ಈ ಹಿನ್ನೆಲೆಯಲ್ಲಿ ನಾಳೆ ನಿಗಧಿಪಡಿಸಿರುವ ಕಾರ್ಯಕ್ರಮ ರದ್ದುಪಡಿಸಬೇಕೆಂದು ಸದಸ್ಯರಾದ ಶ್ರೀ ಕರಣ್‌ಕುಮಾರ್ ತಿಳಿಸಿದರು. ಈ ರೀತಿ ಮಾಡುವುದರಿಂದ ಸರ್ಕಾರ ಸಹ ಮುಜುಗರಕ್ಕೆ ಒಳಗಾಗುವುದು ತಪ್ಪುತ್ತದೆ. ಈ ಅಭಿಪ್ರಾಯವನ್ನು ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್, ಡಾ: ಆರ್.ಕೆ. ಚಂದ್ರನಾಥ್, ಡಾ: ಹೆಚ್. ಟಿ. ಅರವಿಂದ್, ಶ್ರೀ ಹೆಚ್. ಎನ್. ಹರಿಪ್ರಸಾದ್ ಹಾಗೂ ಶ್ರೀ ಎಂ. ಚಿಕ್ಕಮುನಿಯಪ್ಪ ಸಮರ್ಥಿಸಿದರು.

ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರು ಚರ್ಚೆಯಲ್ಲಿ ಭಾಗವಹಿಸಿ ದಿನಾಂಕ 16.06.2020 ರ ಸಿಂಡಿಕೇಟ್ ಗೊತ್ತುವಳಿಯಲ್ಲಿ 3 ತೀರ್ಮಾನಗಳನ್ನು ಕೈಗೊಳ್ಳಲಾಗಿದೆ. ಸರ್ಕಾರಕ್ಕೆ ಬರೆದಿರುವ ಪತ್ರದಲ್ಲಿ ಪ್ರಸ್ತಾಪಿತ ಕಾಮಗಾರಿಗಳ ಮಾಸ್ಟರ್ ಪ್ಲಾನ್, ಕಟ್ಟಡ ವಿನ್ಯಾಸ ಮತ್ತು ವಾಸ್ತುಶಿಲ್ಪಿಗಳು ಸಿದ್ದಪಡಿಸುವ ನಕ್ಷೆ, ಪ್ರಸ್ತುತ ಎಸ್.ಆರ್ ದರಗಳ ಪ್ರಕಾರ ಅಂದಾಜು ವೆಚ್ಚದ ವಿವರಗಳನ್ನು ಸಿದ್ದಪಡಿಸಿ, ವಿಶ್ವವಿದ್ಯಾನಿಲಯದ ಕಾಮಗಾರಿ ಸಮಿತಿ ಹಾಗೂ ಸಿಂಡಿಕೇಟ್ ಸಭೆಗಳ ಅನುಮೋದನೆಯೊಂದಿಗೆ ಸರ್ಕಾರಕ್ಕೆ ಆಡಳಿತಾತ್ಮಕ ಅನುಮೋದನೆಗಾಗಿ ಸಲ್ಲಿಸಬೇಕಾಗಿತ್ತು. ಸರ್ಕಾರಕ್ಕೆ ದಿನಾಂಕ 10.07.2020 ರಂದು ಬರೆದ ಪತ್ರದಲ್ಲಿ ವಿಶ್ವವಿದ್ಯಾನಿಲಯ ಸಿದ್ದಪಡಿಸುವ Master Plan, ವಾಸ್ತು ಶಿಲ್ಪ ವಿನ್ಯಾಸಗಳ ಪ್ರಕಾರ ವಿವರವಾದ ವರದಿ ಸಿದ್ದಪಡಿಸಿ ಅದನ್ನು ವಿಶ್ವವಿದ್ಯಾಲಯದ ಕಾಮಗಾರಿ ಸಮಿತಿ ಮತ್ತು ಸಿಂಡಿಕೇಟ್ ಸಭೆಗಳ ಅನುಮೋದನೆ ಪಡೆದು ಅನುಷ್ಠಾನಗೊಳಿಸಬೇಕೆಂಬ ನಿಬಂದನೆ ಇದೆ. ಸಿಂಡಿಕೇಟ್ ತೀರ್ಮಾನದ (1) ಮತ್ತು (2)ನ್ನು ಸೇರಿಸಿ ಪತ್ರ ಬರೆದಿರುತ್ತಾರೆ. ಸರ್ಕಾರ ಆದೇಶ ಹೊರಡಿಸುವ ಸಂದರ್ಭದಲ್ಲಿ, Master Plan ಮತ್ತು ವಾಸ್ತು ಶಿಲ್ಪ ವಿನ್ಯಾಸಗಳನ್ನು ಕಾಮಗಾರಿಗಳನ್ನು ನಿರ್ವಹಿಸಲು ಸಂಸ್ಥೆ ಸಿದ್ದಪಡಿಸುತ್ತದೆ ಎಂದು ತಿಳಿಸಿದರು. ಸರ್ಕಾರದ ಆದೇಶದ ಪ್ರಕಾರ ಕಾಮಗಾರಿ ನಿರ್ವಹಿಸುವ ಸಂಸ್ಥೆ ಇವುಗಳೆಲ್ಲ ಸಿದ್ದಪಡಿಸಿದ ನಂತರ ಪುನ: ವಿಶ್ವವಿದ್ಯಾನಿಲಯದ ಕಾಮಗಾರಿ ಸಮಿತಿ ಹಾಗೂ ಸಿಂಡಿಕೇಟ್ ಸಭೆಗಳು ಪರಿಶೀಲಿಸಿ ಅನುಮೋದನೆ ನೀಡಬೇಕಾಗುತ್ತದೆ ಎಂದು ಹೇಳಿದರು.

ಆಡಳಿತಾತ್ಮಕ ಅನುಮೋದನೆ ಪಡೆಯಲು ವಿಸ್ತೃತ ಯೋಜನಾ ವರದಿ, ಅಂದಾಜುಗಳ ಅಗತ್ಯ ವಿರುವುದಿಲ್ಲ. ಕರಡು ಅಂದಾಜುಗಳ ಆಧಾರದ ಮೇಲೆ ಆಡಳಿತಾತ್ಮಕ ಅನುಮೋದನೆ ನೀಡಲಾಗುತ್ತದೆ. ಸರ್ಕಾರ ಈ ಕಾಮಗಾರಿಗಳನ್ನು ನಿರ್ವಹಿಸಲು ವಹಿಸಿದ ಸಂಸ್ಥೆ ಎಲ್ಲಾ ಪ್ರಕ್ರಿಯೆಗಳು ಪೂರ್ಣಗೊಂಡ ಮೇಲೆ ಟೆಂಡರ್ ಕರೆದು ಅವುಗಳನ್ನು ನಿಯಮಾನುಸಾರ ಪರಿಶೀಲನೆ ನಡೆಸಿ ಯಶಸ್ವಿ ಗುತ್ತಿಗೆದಾರರಿಗೆ ವಹಿಸುತ್ತಾರೆ. ಈ ಹಂತದಲ್ಲಿ ಸಹ ವಿಶ್ವವಿದ್ಯಾನಿಲಯದ ಅನುಮೋದನೆ ಪಡಯಲೇಬೇಕಾಗುತ್ತದೆ. ಹಾಗಾಗಿ ನಿರ್ವಹಣಾ ಸಂಸ್ಥೆ ಗುರುತಿಸುವುದು ಹಾಗೂ ಆಡಳಿತಾತ್ಮಕ ಅನುಮೋದನೆ ನೀಡುವುದು ಈ ಎರಡು ಹಂತದ ತೀರ್ಮಾನಗಳು ಸರ್ಕಾರದ ಮಟ್ಟದಲ್ಲಿ ಆಗಿರುವುದರಿಂದ ಸಿಂಡಿಕೇಟ್ ಪರಿಶೀಲನೆಗೆ ಮಂಡಿಸಿರುವ ಪ್ರಸ್ತಾವನೆಯನ್ನು ಪರಿಗಣಿಸುವಂತೆ ಸದಸ್ಯರನ್ನು ಕೋರಿದರು.

ಮಾನ್ಯ ಸದಸ್ಯರಾದ ಶ್ರೀ ಟಿ.ಹೆಚ್. ಶ್ರೀನಿವಾಸಯ್ಯ ನವರು ಈಗಾಗಲೇ ಸಾಕಷ್ಟು ಚರ್ಚೆ ಆಗಿದೆ. ಈಗ ಸಿಂಡಿಕೇಟ್ ಮುಂದೆ ಮಂಡಿಸಿದ ಎರಡು ವಿಷಯಗಳ ಕುರಿತು ತೀರ್ಮಾನ ಮಾಡಬೇಕೆಂದು ಒತ್ತಾಯಿಸಿದರು. ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸುವ ಪೂರ್ವದಲ್ಲಿ ಸಿಂಡಿಕೇಟ್ ಸಭೆಯ ಅನುಮೋದನೆ ಪಡೆಯಬೇಕಾಗಿತ್ತು. ತಪ್ಪಾಗಿದೆ ಎಂದು ಒಪ್ಪಿಕೊಳ್ಳಬೇಕಾಗುತ್ತದೆ, ಸರ್ಕಾರವನ್ನು ಮುಜುಗರಕ್ಕೆ ಈಡುಮಾಡುವುದು ಸರಿಯಲ್ಲ. ಸಿಂಡಿಕೇಟ್ ತೀರ್ಮಾನದಲ್ಲಿ ಸರ್ಕಾರಿ ಸ್ವಾಮ್ಯದ ಒಂದು ಸಂಸ್ಥೆಯಿಂದ ಮಾಡಿಸಬೇಕೆಂದು ಇದೆ. ನಾಳೆ ಶಿಲಾನ್ಯಾಸ ಕಾರ್ಯಕ್ರಮವನ್ನು ಸರ್ಕಾರ ಆಯೋಜಿಸಿದ್ದು ಆಮಂತ್ರಣ ಪತ್ರಿಕೆಗಳನ್ನು ಶಾಸಕರು ಮತ್ತು ಲೋಕಸಭಾ ಸದಸ್ಯರಿಗೆ ನೀಡಿದ್ದಾರೆ. ಸಿಂಡಿಕೇಟ್ ಅನುಮೋದನೆ ಇಲ್ಲದೆ ಹಣ ಬಿಡುಗಡೆ ಮಾಡಲು ಸಾಧ್ಯವಿಲ್ಲ. ಸರ್ಕಾರದ ಪರವಾಗಿ ನಾವು ಇರುವುದನ್ನು ಪ್ರಸ್ತುತಪಡಿಸಬೇಕು. ಆದುದರಿಂದ ಕಾರ್ಯಕ್ರಮ ನಡೆಯಲು ಒಪ್ಪಿಗೆ ನೀಡಬೇಕೆಂದು ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್, ಶ್ರೀ ಕರಣ್‌ಕುಮಾರ್, ಡಾ. ಆರ್.ಕೆ. ಚಂದ್ರನಾಥ್, ಶ್ರೀ ಹೆಚ್.ಎನ್. ಹರಿಪ್ರಸಾದ, ಡಾ: ಹೆಚ್.ಟಿ. ಅರವಿಂದ್ ಮುಂತಾದವರು ನಾವು ಸರ್ಕಾರದ ಜೊತೆಗೆ ಇದ್ದೇವೆ. ಸರ್ಕಾರ ಹಾಗೂ ವಿಶ್ವವಿದ್ಯಾನಿಲಯ ಮುಜುಗರಕ್ಕೆ ಒಳಗಾಗುವುದು ತಪ್ಪಬೇಕು ಎನ್ನುವುದೇ ನಮ್ಮ ಉದ್ದೇಶ. ನಾಳೆ ಕಾರ್ಯಕ್ರಮ ಜರುಗಿದರೆ, ತಪ್ಪು ಸಮರ್ಥಿಸಿದಂತೆ ಆಗುತ್ತದೆ. ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳ ಅಗತ್ಯಗಳನ್ನು ಪಟ್ಟಿ ಮಾಡಿ ಸಿಂಡಿಕೇಟ್ ತೀರ್ಮಾನ (1) ರಲ್ಲಿ ನಮೂದಿಸಿದ ಕ್ರಮಗಳನ್ನು ಅನುಸರಿಸಿ ನಂತರ ಮುಂದುವರೆಯಬೇಕು. ಖಂಡಿತವಾಗಿ ಶಿಲಾನ್ಯಾಸ ಕಾರ್ಯಕ್ರಮ ಮಾಡೋಣ. ಕುಲಪತಿಗಳು ನಿವೃತ್ತಿ ಹೊಂದಿದರೂ ಸಹ ಅವರನ್ನು ಸಮಾರಂಭಕ್ಕೆ ಕರೆಸೋಣ. ಅವರ ಪ್ರಯತ್ನದಿಂದಾಗಿ ಇದು ಸಾಧ್ಯವಾಗಿದೆ. ಅತ್ಯಂತ ತುರಾತುರಿಯಲ್ಲಿ ಈ ಕಾರ್ಯಕ್ರಮ ಆಯೋಜಿಸಲಾಗಿದೆ. ಯಾವ ಸದಸ್ಯರಿಗೂ ಆಹ್ವಾನ ಪತ್ರಿಕೆ ಬಂದಿಲ್ಲ. ಆಗಿರುವ ಲೋಪದೋಷಗಳನ್ನು ಸರಿಪಡಿಸಿಕೊಂಡು ಕೆಲಸಮಯದ ನಂತರ ಅತ್ಯಂತ ಯಶಸ್ವಿಯಾಗಿ ಕಾರ್ಯಕ್ರಮ ಮಾಡೋಣ. ಸಧ್ಯಕ್ಕೆ ನಾಳೆ ನಿಗದಿಪಡಿಸಿದ ಶಿಲಾನ್ಯಾಸ ಕಾರ್ಯಕ್ರಮ ಮುಂದೂಡುವುದು ಸರಿಯಾದ ಕ್ರಮವೆಂದು ಹೇಳಿದರು.

ಡಾ: ಹೆಚ್.ಯು. ತಳವಾರ, ನಿರ್ದೇಶಕರು ತಾಂತ್ರಿಕ ಶಿಕ್ಷಣ ಇಲಾಖೆ, ರವರು ಸದಸ್ಯರು ವ್ಯಕ್ತಪಡಿಸಿರುವ ಅಭಿಪ್ರಾಯ ಸರಿಯಿದೆ. ವಿಧಿವಿಧಾನಗಳ ಪಾಲನೆಯಲ್ಲಿ ವಿಶ್ವವಿದ್ಯಾನಿಲಯದಿಂದ ಲೋಪವಾಗಿದೆ. ಸರ್ಕಾರದಿಂದ ತಪ್ಪು ಆಗಿಲ್ಲ. ಸಿಂಡಿಕೇಟ್ ಅನುಮೋದನೆ ಪಡೆಯುವುದು ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿದ ವಿಷಯ. ನಾಳೆ ಕಾರ್ಯಕ್ರಮ ನಡೆಸಲು ನಿರ್ಧಾರವಾಗಿದೆ. ಇದು ಅತ್ಯಂತ ಕ್ಲಿಷ್ಟಕರ ಪರಿಸ್ಥಿತಿ. ಸರ್ಕಾರ ತನ್ನ protocol ಪ್ರಕಾರ ಕಾರ್ಯಕ್ರಮದ ವ್ಯವಸ್ಥೆ ಮಾಡಿರುತ್ತದೆ. ವಿಭಾಗಗಳಿಂದ ಅಗತ್ಯತೆಗಳ ಮಾಹಿತಿಯನ್ನು ಬೇಗನೆ ಪಡೆಯಬಹುದಾಗಿತ್ತು. ಸಿಂಡಿಕೇಟ್ ಸಭೆಯನ್ನು ಮೊದಲೇ ಕರೆದು ಅನುಮೋದನೆ ಪಡೆಯಬಹುದಾಗಿತ್ತು. ಕಾಮಗಾರಿಗಳಿಗೆ ಅಗತ್ಯವಾದ ಅನುದಾನ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಯ ಅನುಮೋದನೆ ಪಡೆದು ಬಿಡುಗಡೆ ಮಾಡಬೇಕಾಗುತ್ತದೆ. ಕಾಮಗಾರಿ ನಿರ್ವಹಿಸುವ ಸಂಸ್ಥೆ ಅನುದಾನ ಬಿಡುಗಡೆ ಆದ ನಂತರವೇ ಟೆಂಡರ್ ಕರೆಯುತ್ತಾರೆ. ಟೆಂಡರ್‌ಗಳನ್ನು ಪರಿಶೀಲಿಸಿ ಸಂಬಂಧಿಸಿದ ಪ್ರಾಧಿಕಾರಗಳ ಅನುಮೋದನೆ ಪಡೆದು ಅಂತಿಮಗೊಳಿಸಲಾಗುತ್ತದೆ. ಕೇವಲ ಶಿಲಾನ್ಯಾಸ ಮಾಡುವುದರಿಂದ ಕಾಮಗಾರಿ ಪ್ರಾರಂಭವಾಗುವುದಿಲ್ಲ. ಆದಕಾರಣ ಮಾನ್ಯ ಆಯುಕ್ತರು ತಿಳಿಸಿದಂತೆ ಕಾರ್ಯಕ್ರಮ ಜರುಗಲು ಅವಕಾಶ ಮಾಡಿಕೊಡಬೇಕೆಂದು ತಿಳಿಸಿದರು. ಇದೇ ರೀತಿಯ ಅಭಿಪ್ರಾಯ ಮಾನ್ಯ ಸದಸ್ಯರಾದ ಡಾ. ಬಿ. ರಮೇಶ್ ಕುಲಸಚಿವರು(ಮೌಲ್ಯಮಾಪನ), ಡಾ: ಲಿಡಿಯಾ ಪಿ. ಸ್ಯಾಮುಯೆಲ್ ರವರು ತಿಳಿಸಿದರು.

ನಾಳಿನ ಶಿಲಾನ್ಯಾಸ ಕಾರ್ಯಕ್ರಮ ಜರುಗಿದರೆ, ಸರ್ಕಾರಕ್ಕೆ ಹೆಚ್ಚಿನ ಮುಜುಗರವಾಗುತ್ತದೆ ಆಗದೇ ಇದ್ದರೆ ನಾಳೆ ಒಂದು ದಿನ ಮಾತ್ರ ಮುಜುಗರವಾಗುತ್ತದೆ. ಆಗಿರುವ ನ್ಯೂನ್ಯತೆಗಳನ್ನು ಸರಿಪಡಿಸಿಕೊಂಡು ಕಾರ್ಯಕ್ರಮ ಮಾಡಿದಾಗ ಹೆಚ್ಚಿನ ಬೆಲೆ ಬರುತ್ತದೆ ಹಾಗೂ ಅರ್ಥಪೂರ್ಣವಾಗುತ್ತದೆ. ನಾಳಿನ ಕಾರ್ಯಕ್ರಮ ಜರುಗಿದರೆ ಕೆಟ್ಟ ಸಂಪ್ರದಾಯಕ್ಕೆ ದಾರಿಯಾಗುತ್ತದೆ. ಕಾರಣ ವಿಶ್ವವಿದ್ಯಾನಿಲಯದ ಹಾಗೂ ಸರ್ಕಾರದ ಹಿತದೃಷ್ಟಿಯಿಂದ ಕಾರ್ಯಕ್ರಮವನ್ನು ಮುಂದೂಡಬೇಕೆಂದು ಹೆಚ್ಚಿನ ಸಂಖ್ಯೆಯ ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಿದರು.

ಅಂತಿಮವಾಗಿ ಕುಲಪತಿಗಳು ಮಾತನಾಡಿ ಈ ಎಲ್ಲಾ ವಿಷಯಗಳ ಕುರಿತು ಸಿಂಡಿಕೇಟ್ ತೀರ್ಮಾನವನ್ನು ವಿವರವಾಗಿ ಸರ್ಕಾರಕ್ಕೆ ತಿಳಿಸಲಾಗಿದೆ. ಮಧ್ಯ ಚುನಾವಣಾ ನೀತಿ ಸಂಹಿತೆ ಹಿನ್ನೆಲೆಯಲ್ಲಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಸರ್ಕಾರದ ಅನುಮೋದನೆ ನಂತರ ಸಿಂಡಿಕೇಟ್ ಸಭೆಗೆ ಮಂಡಿಸಲು ತೀರ್ಮಾನಿಸಲಾಗಿತ್ತು. ವಿಧಿವಿಧಾನಗಳನ್ನು ಅನುಸರಿಸುವಲ್ಲಿ ಲೋಪದೋಷ ಆಗಿರುವುದಕ್ಕೆ ವಿಷಾದ ವ್ಯಕ್ತಪಡಿಸಿದರು ಹಾಗೂ ಇದರ ನೈತಿಕ ಹೊಣೆ ತಮ್ಮದೆಂದು ಹೇಳಿದರು. ಹಲವಾರು ಅಡೆತಡೆಗಳಿಂದ, ವಿಶ್ವವಿದ್ಯಾನಿಲಯದಲ್ಲಿ ಅಪೇಕ್ಷಿತ ಅಭಿವೃದ್ಧಿ ಕಾಮಗಾರಿಗಳು ಆಗಿಲ್ಲ. ಈಗಿರುವ ಪ್ರಸ್ತಾವನೆಯಲ್ಲಿ ಶೈಕ್ಷಣಿಕ ಭವನ ಹಾಗೂ ಕ್ರೀಡಾ ಸಂಕೀರ್ಣ ನಿರ್ಮಿಸುವ ಎರಡು ಹೊಸ ಯೋಜನೆಗಳಿವೆ. ಉಳಿದಂತೆ ಹಾಲಿ ಕಟ್ಟಡಗಳ

ನವೀಕರಣ ಮಾಡಲಾಗುತ್ತದೆ. ವಿಶ್ವವಿದ್ಯಾನಿಲಯದಲ್ಲಿ ಇಂಜಿನಿಯರಿಂಗ್ ವಿಭಾಗ ಇಲ್ಲದೆ ವಿಶ್ವವಿದ್ಯಾನಿಲಯವೇ ಟೆಂಡರ್ ಕರೆದು ಕಾಮಗಾರಿ ಕೈಗೊಳ್ಳಲು ಹಲವಾರು ಕಾರಣಗಳಿಂದ ಸಾಧ್ಯವಾಗಲಿಲ್ಲ. ಈ ಯೋಜನೆ ಕುರಿತು ವಿಶ್ವವಿದ್ಯಾನಿಲಯದ ಕಾಮಗಾರಿ ಸಮಿತಿ, ಸಿಂಡಿಕೇಟ್ ಮತ್ತು ಸರ್ಕಾರದ ಮಟ್ಟದಲ್ಲಿ ಸಾಕಷ್ಟು ಚರ್ಚೆಯಾಗಿದೆ. ಆಡಳಿತಾತ್ಮಕ ಅನುಮೋದನೆ ನಂತರ ಟೆಂಡರ್ ಕರೆಯುವ ಪ್ರಕ್ರಿಯೆ ಪ್ರಾರಂಭವಾಗುತ್ತದೆ. ಎಲ್ಲಾ ಹಂತದಲ್ಲಿ ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳ ಪರಿಶೀಲನೆಗೆ ಒಳಪಡುತ್ತದೆ. ಕಾರಣ ಈಗ ಆಯೋಜಿಸಿರುವ ಶಿಲಾನ್ಯಾಸ ಕಾರ್ಯಕ್ರಮ ಜರುಗಲು ಅವಕಾಶ ಮಾಡಿಕೊಡಬೇಕೆಂದು ಮತ್ತೊಮ್ಮೆ ವಿನಂತಿಸಿದರು. ಈ ಮಧ್ಯೆ ಮುಖ್ಯಮಂತ್ರಿಗಳ ದೆಹಲಿ ಭೇಟಿನೀಡುವ ಕಾರ್ಯಕ್ರಮದ ಹಿನ್ನೆಲೆಯಲ್ಲಿ ನಾಳಿನ ಕಾರ್ಯಕ್ರಮ ರದ್ದು ಪಡಿಸುವ ಸಂದೇಶವನ್ನು ಸಭೆಗೆ ತಿಳಿಸಿದರು.

**ಸಿಂಡಿಕೇಟ್ ನಿರ್ಣಯ:**

**ಸುಧೀರ್ಘ ಚರ್ಚೆಯ ನಂತರ ವಿಶ್ವವಿದ್ಯಾನಿಲಯದಿಂದ ಹಲವಾರು ಲೋಪದೋಷಗಳು ಆಗಿರುವುದರಿಂದ, ಈ ಲೋಪದೋಷಗಳನ್ನು ಸರಿಪಡಿಸಿಕೊಂಡು ಮುಂದುವರೆಯಲು ಕಾಲಾವಕಾಶ ಬೇಕಾಗಿರುವುದರಿಂದ ದಿನಾಂಕ 18.11.2020 ರಂದು ಆಯೋಜಿಸಿರುವ ಶಿಲಾನ್ಯಾಸ ಕಾರ್ಯಕ್ರಮವನ್ನು ಮುಂದೂಡಬೇಕೆಂದು ಸಿಂಡಿಕೇಟ್ ಸರ್ವಾನುಮತದಿಂದ ನಿರ್ಣಯಿಸಿತು.**

ಕುಲಸಚಿವರ ವಂದನಾರ್ಪಣೆ ಹಾಗೂ ರಾಷ್ಟ್ರಗೀತೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಿ/–
**ಕುಲಸಚಿವರು**

ಸಹಿ/–
**ಕುಲಪತಿಗಳು**

2/12

**ಕುಲಸಚಿವರು**
**ಬೆಂಗಳೂರು ನಗರ ವಿಶ್ವವಿದ್ಯಾನಿಲಯ**